**RGRHCL**

# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ದಿಮೆ)

ನಂ. 1,2,3,4,ಐ.ಟಿ.ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ
ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು - 560 044.

**1. ಯೋಜನೆಯ ಹೆಸರು**

**ಪ್ರಧಾನ ಮಂತ್ರಿ ಆವಾಸ್ (ಗ್ರಾಮೀಣ) (ಕೇಂದ್ರ ಪುರಸ್ಕೃತ)**
(ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ವಸತಿ ಕಲ್ಪಿಸುವ ಯೋಜನೆ.)

**2. ಪ್ರತಿ ಮನೆಗೆ ಆರ್ಥಿಕ ಸಹಾಯ**

| ವರ್ಗ | ಒಟ್ಟು | ಕೇಂದ್ರ | ರಾಜ್ಯ |
|---|---|---|---|
| ಎಸ್ ಸಿ/ ಎಸ್.ಟಿ | ರೂ. 150000 | ರೂ. 72000 | ರೂ. 78000 |
| ಸಾಮಾನ್ಯ | ರೂ. 120000 | ರೂ. 72000 | ರೂ. 48000 |

ಅ) ಸಹಾಯಧನ

- ಎಸ್ ಸಿ/ ಎಸ್.ಟಿ ರೂ.1,50,000/-
- ಸಾಮಾನ್ಯ ರೂ 120000/-

ಆ) ಫಲಾನುಭವಿಯ ಸ್ವಸಹಾಯ ವಂತಿಗೆ

- ಎಲ್ಲಾ ವರ್ಗದ ಫಲಾನುಭವಿಗಳಿಗೆ ಕನಿಷ್ಟ ರೂ 10000/-

ಈ ಯೋಜನೆಯಡಿಯಲ್ಲಿ ಒದಗಿಸಲಾಗುವ ಆರ್ಥಿಕ ಸಹಾಯಧ ಜೊತೆಗೆ, ಫಲಾನುಭವಿಯು ಕನಿಷ್ಟ ರೂ. 30000/- ಗಳನ್ನು ಅಥವಾ ತನ್ನ ಸಾಮರ್ಥ್ಯ ಹಾಗೂ ವಸತಿಯ ಅವಶ್ಯಕತೆಗೆ ಅನುಸಾರವಾಗಿ ಸಾಧ್ಯವಾದಷ್ಟು ಸ್ವಂತ ಉಳಿತಾಯ ಹೂಡಿಕೆ ಮಾಡಿ ಹೆಚ್ಚಿನ ಹಾಗೂ ಉತ್ತಮ ಸೌಲಭ್ಯಗಳನ್ನು ಹೊಂದಬಹುದು.

**3. ಡಿ.ಆರ್.ಐ.ಯಡಿ ಸಾಲ & ಬಡ್ಡಿಯ ದರ**

ಈ ಯೋಜನೆಯಡಿ ಸ್ಥಳೀಯ ಬಾಂಕಿನಿಂದ ರೂ. 20000/-ದವರೆಗೆ 4% ವಾರ್ಷಿಕ ಬಡ್ಡಿದರದಲ್ಲಿ ಡಿ.ಆರ್.ಐ.ಯಡಿಯಲ್ಲಿ ಸಾಲವನ್ನು ಆಯ್ಕೆಯಾದ ಫಲಾನುಭವಿಗಳು ಪಡೆದುಕೊಳ್ಳಲು ಅವಕಾಶವಿರುತ್ತದೆ.

**4. ಫಲಾನುಭವಿಗಳ ಆಯ್ಕೆ**

ಕೇಂದ್ರ ಸರ್ಕಾರದಿಂದ ನೀಡಲಾದ ಫಲಾನುಭವಿಗಳ ಪಟ್ಟಿಯಿಂದ ನಿಯಮಾನುಸಾರ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಿ ಗ್ರಾಮಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಪಟ್ಟಿಗೆ ಅನುಮೋದನೆ ಪಡೆಯಲಾಗುವುದು. ನಂತರ ಸಂಬಂಧಪಟ್ಟ ತಾಲ್ಲೂಕುಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಯ ಅನುಮೋದನೆಯೊಂದಿಗೆ ನಿಗಮದ ಅನುಮೋದನೆ ನೀಡಲಾಗುವುದು.

**5. ಯೋಜನೆಯ ಅನುಷ್ಟಾನ :**

- ಪ್ರತಿ ವರ್ಷ ಕೇಂದ್ರ ಸರ್ಕಾರ ನಿಗಧಿಪಡಿಸುವ ಗುರಿಗನುಗುಣವಾಗಿ ಗುರಿ ನಿಗದಿ ಪಡಿಸಲಾಗುವುದು
- ಮೀಸಲಾತಿ: ಎಸ್‌ಸಿ/ಎಸ್‌ಟಿ–ಶೇ.60, ಅಲ್ಪಸಂಖ್ಯಾತ–ಶೇ.15, ಸಾಮಾನ್ಯ–ಶೇ.25

**6. ಜಿ.ಪಿ.ಎಸ್. ತಂತ್ರಜ್ಞಾನ ಅಳವಡಿಕೆ :**

2011–12ನೇ ಸಾಲಿನಿಂದ ಜಿ.ಪಿ.ಎಸ್. ತಂತ್ರಜ್ಞಾನ ಅಳವಡಿಕೆ ಮಾಡಲಾಗುತ್ತಿದೆ.

ಅವ್ಯವಹಾರವನ್ನು ತಡೆಗಟ್ಟಲು ಹಾಗೂ ಸರ್ಕಾರದ ಹಣ ದುರುಪಯೋಗವಾಗದಂತೆ ನೋಡಿಕೊಂಡು ಫಲಾನುಭವಿಗಳಿಗೆ ವಸತಿ ಸೌಕರ್ಯವನ್ನು ಪಾರದರ್ಶಕತೆಯ ಮೂಲಕ ನೀಡಲು ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ಈ ತಂತ್ರಜ್ಞಾನದ ಉಪಯೋಗಗಳು ಇಂತಿವೆ.

- ಪ್ರತಿ ಮನೆಯ ಪ್ರಗತಿ ಹಂತದ ಛಾಯಾಚಿತ್ರವನ್ನು ಜಿ.ಪಿ.ಎಸ್ ಕ್ಯಾಮರಾ ಮೂಲಕ ಸೆರೆಹಿಡಿಯುವುದು.
- ಒಮ್ಮೆ ವಸತಿ ಸೌಕರ್ಯ ಪಡೆದ ಫಲಾನುಭವಿಗಳ ಪುನರಾವರ್ತನೆಗೆ ತಡೆ.
- ಛಾಯಾಚಿತ್ರದ ಆಧಾರದ ಮೇಲೆ ಅನುದಾನ ಬಿಡುಗಡೆ.
- ಮಾಹಿತಿಗಾಗಿ ಎಲ್ಲಾ ಮನೆಗಳ ಛಾಯಾಚಿತ್ರಗಳು ನಿಗಮದ ವೆಬ್‌ಸೈಟ್‌ನಲ್ಲಿ ಲಭ್ಯ.
- ಹಣದ ದುರ್ಬಳಕೆಗೆ ತಡೆ.

| | | |
|---|---|---|
| 7. | ಅರ್ಹತೆ ಮತ್ತು ಷರತ್ತುಗಳು | 1. ಸಂಬಂಧಪಟ್ಟ ಗ್ರಾಮ ಪಂಚಾಯತ್ ವಾಸಿ ಆಗಿಬೇಕು.<br>2. ಮನೆ/ನಿವೇಶನ ಹಕ್ಕುಪತ್ರವನ್ನು ಹೆಂಡತಿ ಹೆಸರಿನಲ್ಲಿ ವಿತರಿಸಬೇಕು.<br>3. ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.<br>4. **<u>ಮನೆಗಳ ವಿಸ್ತೀರ್ಣ ಮತ್ತು ವಿನ್ಯಾಸ</u>** : ಕನಿಷ್ಟ 25 ಚ.ಮೀ. ನೆಲಗಟ್ಟು ವಿಸ್ತೀರ್ಣ ಇರುವಂತೆ ಮನೆ ನಿರ್ಮಿಸಬೇಕು. ಇದಕ್ಕಾಗಿ ಯಾವುದೇ ನಕ್ಷೆ ಅಥವಾ ವಿನ್ಯಾಸ ನಿಗದಿಪಡಿಸಿರುವುದಿಲ್ಲ. ಆದರೆ ಫಲಾನುಭವಿಗಳಿಗೆ ಅನುಕೂಲವಾಗುವಂತೆ ಮಣ್ಣು, ಹವಾಗುಣ, ಪರಿಸ್ಥಿತಿ, ಸ್ಥಳೀಯವಾಗಿ ಲಭ್ಯವಿರುವ ಸಾಮಾಗ್ರಿಗಳ ಬಳಕೆ ಇತ್ಯಾದಿ ಅಂಶಗಳನ್ನು ಪರಿಗಣಿಸಿ ಪ್ರದೇಶವಾರು ಮತ್ತು ಬದಲಿ ವಿನ್ಯಾಸಗಳನ್ನು ಅನುಸರಿಸಬಹುದು. ಮನೆ ನಿರ್ಮಾಣದ ಪ್ರತಿ ಹಂತದಲ್ಲಿಯೂ ಫಲಾನುಭವಿಯು ಸಕ್ರಿಯವಾಗಿ ಪಾಲ್ಗೊಂಡು ಒಳ್ಳೆಯ ಗುಣಮಟ್ಟದ ಹಾಗೂ ಹೆಚ್ಚಿನ ಸೌಲಭ್ಯಗಳನ್ನು ಹೊಂದಬಹುದು.<br><br>ಒಟ್ಟಾರೆ ಆಗಿಂದ್ದಾಗೆ ಸರ್ಕಾರವು ವಸತಿ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ವಿಧಿಸಬಹುದಾದ ನಿಯಮ ಮತ್ತು ಷರತ್ತುಗಳನ್ನು ತಪ್ಪದೇ ಪಾಲಿಸಬೇಕು. |
| 8. | ಮನೆ ನಿರ್ಮಾಣ ಮಾಡುವ ಕ್ರಮ<br>1. ಸ್ವಂತ ಫಲಾನುಭವಿಗಳಿಂದ | ಫಲಾನುಭವಿಯೇ ಸ್ವತಃ ತನ್ನ ಮನೆಯನ್ನು ಸ್ಥಳೀಯವಾಗಿ ಅನುಮೋದಿತ ನಕ್ಷೆಗನುಗುಣವಾಗಿ ಕಟ್ಟಿಕೊಳ್ಳಬಹುದು (ಇದಕ್ಕಾಗಿ ಕಾಮಗಾರಿ ಆದೇಶ ಹೊರಡಿಸಿ ನಿಗದಿತ ಕಂತುಗಳಲ್ಲಿ ಹಣವನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆ ಮೂಲಕ ನೀಡಲಾಗುವುದು. ನಿರ್ಮಾಣ ಸಂಸ್ಥೆ ಮೂಲಕ ಮನೆ ನಿರ್ಮಾಣಕ್ಕೆ ಅವಕಾಶ ಇರುವುದಿಲ್ಲ. |
| 9. | ಮನೆ ನಿರ್ಮಾಣ ಅವಧಿ: | ಗರಿಷ್ಠ ನಾಲ್ಕು (4) ತಿಂಗಳೊಳಗಾಗಿ ಮನೆಯನ್ನು ಪೂರ್ಣಗೊಳಿಸುವುದು |

ವಿ.ಸೂ : ಚೆಕ್ ಲಿಸ್ಟ್ : (ಒದಗಿಸಬೇಕಾದ ದಾಖಲೆಗಳು - ಸಂಕ್ಷಿಪ್ತ)

**<u>ಫಲಾನುಭವಿಯಿಂದ</u>** :

1. ವಸತಿಗಾಗಿ ನಿಗದಿತ ಅರ್ಜಿ (ನಮೂನೆ-1).
2. ನಿವೇಶನ/ಮನೆಯನ್ನು ಸಾಲ ತೀರುವವರೆಗೂ ನಿಗಮದ ಪರವಾಗಿ ಅಡಮಾನ ಪತ್ರ ಬರೆದುಕೊಡಬೇಕು (ನಮೂನೆ-3ಎ)
3. ಜಾತಿ ಪ್ರಮಾಣ ಪತ್ರ / ಆದಾಯ ಪ್ರಮಾಣ ಪತ್ರ.

**<u>ಸಂಬಂಧಿಸಿದ ಗ್ರಾಮ ಪಂಚಾಯಿತಿ/ಕಾರ್ಯನಿರ್ವಹಣಾಧಿಕಾರಿ/ಜಿಲ್ಲಾ ಪಂಚಾಯತ್ ನ ಮು.ಕಾ.ನಿ. ರಿಂದ</u>** :

1. ಗ್ರಾಮ ಪಂಚಾಯಿತಿ / ಇಲಾಖೆ ಯೋಜನೆಯ ಅಡಿಯಲ್ಲಿ ನಿಯಮಗಳನ್ನು ಪಾಲಿಸಿರುವ ಬಗ್ಗೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಖಾತರಿಪಡಿಸಿಕೊಂಡ ಬಗ್ಗೆ ದೃಢೀಕರಣ ಪತ್ರ
2. ನಿಗದಿಪಡಿಸಿದ ನಮೂನೆಗಳಲ್ಲಿ ಪ್ರತಿ ತಿಂಗಳು / ವರ್ಷ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರಗತಿ ವರದಿಗಳನ್ನು ತಪ್ಪದೇ ಸಲ್ಲಿಸಬೇಕು.
3. ವಸತಿ ಯೋಜನೆಯ ಯಶಸ್ವಿ ಅನುಷ್ಠಾನದ ಬಗ್ಗೆ ಸಂಬಂಧಿಸಿದ ಇತರೆ ಮಾಹಿತಿ ಇತ್ಯಾದಿ.

**<u>ಹೆಚ್ಚಿನ ವಿವರಗಳಿಗೆ ಈ ಕೆಳಕಂಡವರನ್ನು ಸಂಪರ್ಕಿಸಿ:</u>**

1. ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ನಂ. 1,2,3,4,ಐ.ಟಿ.ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು - 560 044.(ದೂರವಾಣಿ 23118888 ಫ್ಯಾಕ್ಸ್ 23145085)

   ಈ-ಮೇಲ್ rgrhcl@rediffmail.com , ವೆಬ್‌ಸೈಟ್ : http://ashraya.kar.nic.in
2. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಜಿಲ್ಲಾಧಿಕಾರಿಗಳು, ಆಯಾಯ ಸಂಬಂಧಿಸಿದ ಜಿಲ್ಲೆಗಳು
3. ಸಂಬಂಧಪಟ್ಟ ತಾಲ್ಲೂಕು ಪಂಚಾಯತಿ ಕಾಯಾ ನಿರ್ವಹಣಾಧಿಕಾರಿಗಳು.
4. ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು.